# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 573 |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20.02.2024 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ನಗರದ ಸ್ವಚ್ಛತೆಗಾಗಿ ಎಷ್ಟು ಜನ ಪೌರ ಕಾರ್ಮಿಕರನ್ನು ಖಾಯಂ ನೌಕರರೆಂದು ನೇಮಿಸಿಕೊಳ್ಳಲಾಗಿದೆ; ಇವರುಗಳನ್ನು ಅನ್ಯ ಕೆಲಸಕ್ಕೆ ನಿಯೋಜನೆ ಮಾಡಲಾಗಿದೆಯೆ; ಒಂದು ವೇಳೆ ನಿಯೋಜನೆ ಮಾಡಿದ್ದೆ ಆದಲ್ಲಿ ಅವರು ಸಮಾನಾಂತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವರ; (ವಿವರವಾದ ಮಾಹಿತಿ ನೀಡುವುದು) | ಕಲಬುರಗಿ ನಗರದ ಸ್ವಚ್ಛತೆಗಾಗಿ 74 ಖಾಯಂ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ. ಅನ್ಯ ಕೆಲಸಕ್ಕೆ ನಿಯೋಜನೆ ಮಾಡಿಕೊಂಡಿರುವುದಿಲ್ಲ. |
| ಆ | ಕಲಬುರಗಿ ನಗರದಲ್ಲಿ ಎಷ್ಟು ವಿಭಾಗಗಳಿವೆ; ಎಷ್ಟು ವಾರ್ಡುಗಳಿವೆ; ಒಂದು ವಿಭಾಗಕ್ಕೆ ಎಷ್ಟು ವಾರ್ಡುಗಳು ಬರುತ್ತದೆ; ಇಲ್ಲಿ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳು ಮತ್ತು ಇವರಿಗೆ ನೀಡಿರುವ ಹುದ್ದೆಗಳ ವಿವರವಾದ ಮಾಹಿತಿ ಒದಗಿಸುವುದು; | ಕಲಬುರಗಿ ನಗರದಲ್ಲಿ 03 ವಿಭಾಗಗಳಿದ್ದು, ಒಟ್ಟು 55 ವಾರ್ಡಗಳಿವೆ.<br>ವಲಯ ಕಛೇರಿ–01, 16 ವಾರ್ಡಗಳು.<br>ವಲಯ ಕಛೇರಿ–02, 18 ವಾರ್ಡಗಳು.<br>ವಲಯ ಕಛೇರಿ–03, 21 ವಾರ್ಡಗಳು.<br>ಸಿಬ್ಬಂದಿಗಳು ಮತ್ತು ಇವರಿಗೆ ನೀಡಿರುವ ಹುದ್ದೆಗಳ ವಿವರವಾದ ಮಾಹಿತಿಯನ್ನು (**ಅನುಬಂಧ-1ರಲ್ಲಿರಿಸಿದೆ**). |
| ಇ | ಕಲಬುರಗಿ ಮಹಾನಗರ ಪಾಲಿಕೆಯು ಹೊರಮೂಲ ಸಂಸ್ಥೆಗಳಿಂದ ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ; ಇವರನ್ನು ಬೇರೆ ಸಮಾನಾಂತರ ಹುದ್ದೆಗಳಿಗೆ ನಿಯೋಜನೆ ಮಾಡಿದ್ದಲ್ಲಿ ಹುದ್ದೆವಾರು ಮಾಹಿತಿ ಒದಗಿಸುವುದು; | ಕಲಬುರಗಿ ಮಹಾನಗರ ಪಾಲಿಕೆಯು ಹೊರಮೂಲ ಸಂಸ್ಥೆಗಳಿಂದ ಈ ಕೆಳಕಂಡ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ.<br>01. DEO-45<br>02. SECURITY GUARDS-42<br>03. BUILDING MAINTENANCE-9<br>04. GARDENERS-24<br>05. OUTSOURCE PK'S-967<br>06. DRIVERS-285<br>07. LOADERS-256<br>08. CLEANERS-60<br><br>ಇವರನ್ನು ಬೇರೆ ಸಮಾನಾಂತರ ಹುದ್ದೆಗಳಿಗೆ ನಿಯೋಜನೆ ಮಾಡಿರುವುದಿಲ್ಲ. |

<table>
<tr>
<td>ಈ</td>
<td>ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಖಾಯಂ/ ಹೊರಮೂಲಗಳಿಂದ ನೇಮಕ ಮಾಡಿಕೊಂಡಿರುವ ಎಷ್ಟು ಪೌರ ಕಾರ್ಮಿಕರಿಗೆ ಸಮವಸ್ತ್ರ ನೀಡಲಾಗಿದೆ? (ವಿವರ ನೀಡುವುದು)</td>
<td>ಪಾಲಿಕೆಯಲ್ಲಿ ಖಾಯಂ/ಹೊರಗುತ್ತಿಗೆ ಪೌರಕಾರ್ಮಿಕರಿಗೆ ಒಟ್ಟು 1190 (ಪ್ರತಿ ಪೌರಕಾರ್ಮಿಕರಿಗೆ ಎರಡು ಜೊತೆ ಸಮವಸ್ತ್ರ ನೀಡಲಾಗಿರುತ್ತದೆ).</td>
</tr>
<tr>
<td>ಉ</td>
<td>ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಒಟ್ಟು ಎಷ್ಟು ಸರ್ಕಾರಿ ವಾಹನಗಳಿವೆ; ಚಾಲ್ತಿಯಲ್ಲಿರುವ ಮತ್ತು ದುರಸ್ಥಿಯಲ್ಲಿರುವ ವಾಹನಗಳ ಮಾಹಿತಿ ಮತ್ತು ಇವುಗಳಿಗೆ ತಗಲುತ್ತಿರುವ ಮಾಹೆವಾರು ವೆಚ್ಚವೆಷ್ಟು; ಬಾಡಿಗೆ ತೆಗೆದುಕೊಂಡಿರುವ ವಾಹನಗಳ ಸಂಖ್ಯೆ ಎಷ್ಟು; ಇವರುಗಳಿಗೆ ನಿಗದಿಪಡಿಸಿರುವ ಬಾಡಿಗೆ ದರ ಎಷ್ಟು; ಯಾವ ಯಾವ ವಾರ್ಡುಗಳಿಗೆ ಎಷ್ಟೆಷ್ಟು ವಾಹನ ನೀಡಲಾಗಿದೆ; (ವಿವರ ನೀಡುವುದು)</td>
<td>ಕಲಬುರಗಿ ಮಹಾನಗರ ಪಾಲಿಕೆಯಲ್ಲಿ 03 ಸರ್ಕಾರಿ ವಾಹನಗಳಿವೆ. ಸದರಿ 03 ವಾಹನಗಳು ಚಾಲ್ತಿಯಲ್ಲಿರುತ್ತವೆ. ಯಾವುದೇ ವಾಹನಗಳು ದುರಸ್ಥಿಯಲ್ಲಿ ಇರುವುದಿಲ್ಲ.
<table>
<tr><th>ಕ್ರ. ಸಂ</th><th>ವಾಹನ ಸಂಖ್ಯೆ</th><th>ಮಾಹೆ</th><th>ಇಂಧನ ವೆಚ್ಚ</th><th>ವಾಹನ ನಿರ್ವಹಣೆ ವೆಚ್ಚ</th></tr>
<tr><td>1</td><td rowspan="9">KA32N7080 (INNOVA)<br>KA32P0789 (INNOVA)<br>KA32P0155 (INNOVA)</td><td>APR-23</td><td>9,383</td><td>-</td></tr>
<tr><td>2</td><td>MAY-23</td><td>46,651</td><td>11,899</td></tr>
<tr><td>3</td><td>JUN-23</td><td>54,456</td><td>-</td></tr>
<tr><td>4</td><td>JUL-23</td><td>47,178</td><td>2,05,518</td></tr>
<tr><td>5</td><td>AUG-23</td><td>88,499</td><td>-</td></tr>
<tr><td>6</td><td>SEP-23</td><td>55,332</td><td>-</td></tr>
<tr><td>7</td><td>OCT-23</td><td>61,821</td><td>-</td></tr>
<tr><td>8</td><td>NOV-23</td><td>79,534</td><td>-</td></tr>
<tr><td>9</td><td>DEC-23</td><td>78,307</td><td>23,791</td></tr>
</table>
<br>ಬಾಡಿಗೆ ವಾಹನಗಳ ಸಂಖ್ಯೆ: 30
<br><br>ಬಾಡಿಗೆ ವೆಚ್ಚ 27 ವಾಹನಗಳು (ಪ್ರತಿ ಮಾಹೆಗೆ ಒಂದು ವಾಹನಕ್ಕೆ ರೂ. 35.000/- ಮತ್ತು 03 ಸರ್ಕಾರಿ ವಾಹನಗಳು (ಪ್ರತಿ ಮಾಹೆಗೆ ಒಂದು ವಾಹನಕ್ಕೆ ರೂ. 39.500/-)
<br><br>ಪಾಲಿಕೆ ಒಡೆತನದ ವಾಹನಗಳನ್ನು ದೈನಂದಿನ ಕಸ ಸಂಗ್ರಹಣೆಗೆ ವಾರ್ಡ್‌ವಾರು ಹಂಚಿಕೆಯಾದ ವಾಹನಗಳ ವಿವರವನ್ನು(ಅನುಬಂಧ-2 ರಲ್ಲಿರಿಸಿದೆ).</td>
</tr>
<tr>
<td>ಊ</td>
<td>ಯಾವ ಯಾವ ಅಧಿಕಾರಿಗಳು ವಾಹನವನ್ನು ಉಪಯೋಗಿಸುತ್ತಿದ್ದಾರೆ; ಆಯುಕ್ತರ ವಿವೇಚನೆಯಿಂದ ವಾಹನ ಪಡೆದ ಅಧಿಕಾರಿಗಳೆಷ್ಟು; (ಸಂಪೂರ್ಣ ವಿವರ ಒದಗಿಸುವುದು)</td>
<td>ಮಹಾನಗರ ಪಾಲಿಕೆಗಳ ಸಾಮಾನ್ಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು-2011ರನ್ವಯ ಕಲಬುರಗಿ ಮಹಾನಗರ ಪಾಲಿಕೆಗೆ ಅವಶ್ಯವಿರುವ ವಾಹನಗಳನ್ನು ಪಾಲಿಕೆಯ ಕಾರ್ಯದೇಶ ದಿನಾಂಕ: 31-09-2022ರಂತೆ ಶ್ರೀ ಅವಿನಾಶ ಟ್ರಾವೆಲ್ಸ್ ಏಜೆನ್ಸಿ ಮೂಲಕ ಒಟ್ಟು 30 ವಾಹನಗಳನ್ನು ಚಾಲಕರೊಂದಿಗೆ ಬಾಡಿಗೆ ರೂಪದಲ್ಲಿ ಪಡೆಯಲಾಗಿರುತ್ತದೆ.<br>(ವಿವರ ಅನುಬಂಧ-3ರಲ್ಲಿರಿಸಿದೆ).</td>
</tr>
</table>

| | | |
|---|---|---|
| | | ಈ ಪೈಕಿ ಪಾಲಿಕೆ ಅಧಿಕಾರಿಗಳಿಗೆ 09 ವಾಹನಗಳನ್ನು ಪಾಲಿಕೆಯ ಕಛೇರಿ ಆದೇಶ ದಿನಾಂಕ: 20-01-2024 ರನ್ವಯ ಹಂಚಿಕೆ ಮಾಡಲಾಗಿರುತ್ತದೆ (**ವಿವರ ಅನುಬಂಧ-4 ರಲ್ಲಿರಿಸಿದೆ**). |
| ಋ | ಉದನೂರು ಸೀಮಾಂತರದ ಕಸ ವಿಲೇವಾರಿ ಘಟಕಕ್ಕೆ ಪ್ರತಿನಿತ್ಯ ಎಷ್ಟು ವಾಹನಗಳು ಕಸ ವಿಲೇವಾರಿ ಮಾಡುತ್ತಿವೆ; ವಿವರ ನೀಡುವುದು ಇದರಲ್ಲಿ ಎಷ್ಟು ಸರ್ಕಾರಿ/ಬಾಡಿಗೆ ವಾಹನಗಳಿವೆ; ಇದಕ್ಕೆ ವ್ಯಯವಾಗುತ್ತಿರುವ ಇಂಧನದ ವಿವರ ನೀಡುವುದು? | ಪಾಲಿಕೆಯಲ್ಲಿ ಒಟ್ಟು 57 ವಾಹನಗಳನ್ನು ಕಸ ವಿಲೆವಾರಿ ಘಟಕಕ್ಕೆ ಉಪಯೊಗಿಸಲಾಗುತ್ತಿದೆ ಇವುಗಳಲ್ಲಿ 22 ಕಂಪ್ಯಾಕ್ಟರ್, 26 ಟ್ರಾಕ್ಟರ್, 09 ಟಿಪ್ಪರ್‌ಗಳನ್ನು ದೈನಂದಿನ ಕಸ ವಿಲೇವಾರಿ ಬಳಕೆ ಮಾಡಲಾಗುತ್ತಿದೆ (**ಅನುಬಂಧ-5ರಲ್ಲಿರಿಸಿದೆ**).<br><br>ಪ್ರಸ್ತುತ ಪಾಲಿಕೆಯಿಂದ ಯಾವುದೆ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆದಿರುವುದಿಲ್ಲ.<br><br>ಇಂಧನ ಪೂರೈಕೆಯ ಸಂಬಂಧಿಸಿದಂತೆ ಡಿಸೆಂಬರ್-2023ರ ಮಾಹೆಯ ಬಳಕೆಯಾಗಿರುವ ಡಿಸೇಲ್ ವಿವರ (**ಅನುಬಂಧ-6ರಲ್ಲಿರಿಸಿದೆ**). |

ನಅಇ 14 ಎಸಿಜಿ 2024(ಇ)

21/02/2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಹಾಗೂ
ನಗರ ಯೋಜನೆ ಸಚಿವರು.